ಇ) ಬಾವಿ ಹಾಗೂ ಬೋರ್‌ವೆಲ್‌ಗಳಿಂದ ನೀರಾವರಿ ಸೌಲಭ್ಯ ಹೊಂದಿರುವ ಜಮೀನೆಷ್ಟು (ಇದರ ಪ್ರತಿಶತ ಪ್ರಮಾಣವೆಷ್ಟು);

ಈ) ಮೇಲಿನ ಎಲ್ಲಾ ಜಮೀನು ಬಿಟ್ಟು ಮಳೆಯಾಶ್ರಿತ ಕೃಷಿ ಮಾಡುವ ರೈತರೆಷ್ಟು ಮತ್ತು ಅದರ ಜಮೀನು ಎಷ್ಟು;

ಉ) ಈ ಜಮೀನಿನಲ್ಲಿ ಈ 5 ವರ್ಷಗಳಲ್ಲಿ ನೀರು ಮತ್ತು ಮಣ್ಣಿನ ಸಂರಕ್ಷಣೆಗೊಳಪಟ್ಟ ಜಮೀನು ಎಷ್ಟು;

ಊ) ಉಳಿದೆಲ್ಲ ಜಮೀನಿನಲ್ಲಿ ನೀರು ಮತ್ತು ಮಣ್ಣಿನ ಸಂರಕ್ಷಣೆಗೊಳಪಡಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಬೇಕಾಗುವ ಹಣ ವೆಷ್ಟು;

ಋ) ಈ ಹಣವನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಜೋಡಿಸಿ ಮಳೆಯಾಶ್ರಿತ ಕೃಷಿಕರ ಜೀವನ ಸುಧಾರಿಸುವಲ್ಲಿ ಉಪಯೋಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು):

ಅ) ಒಟ್ಟು ಸಾಗುವಳಿ ಭೂಮಿ 102.59 ಲಕ್ಷ ಹೆಕ್ಟೇರ್ ಪ್ರದೇಶವಾಗಿರುತ್ತದೆ. ಇದರಲ್ಲಿ ನೀರಾವರಿ ಜಮೀನು 23.00 ಲಕ್ಷ ಹೆಕ್ಟೇರ್ ಪ್ರದೇಶ.

ಆ) ಶೇ.22.42 ಪ್ರಮಾಣದಲ್ಲಿದೆ.

ಇ) 9.59 ಲಕ್ಷ ಹೆಕ್ಟೇರ್ ಪ್ರದೇಶವು ಭಾವಿ ಮತ್ತು ಬೋರ್‌ವೆಲ್‌ಗಳಿಂದ ನೀರಾವರಿ ಜಮೀನಾಗಿರುತ್ತದೆ. ಇದು ಒಟ್ಟು ನೀರಾವರಿ ಜಮೀನಿನ ಶೇ.41.69 ರಷ್ಟಾಗುತ್ತದೆ.

ಈ) ಮಾಳೆಯಾಶ್ರಿತ ಕೃಷಿ ಪ್ರದೇಶವು 84.00 ಲಕ್ಷ ಹೆಕ್ಟೇರ್‌ಗಳಾಗಿದ್ದು, ರೈತರ ಸಂಖ್ಯೆ ಅಂದಾಜು 43.81 ಲಕ್ಷ.

ಉ) ಜಲಾನಯನ ಅಭಿವೃದ್ಧಿ ಇಲಾಖೆ ಅಸ್ತಿತ್ವಕ್ಕೆ ಬಂದ ನಂತರ ಅಂದರೆ 2000–01 ರಿಂದ 2004–05ನೇ ಡಿಸೆಂಬರ್ ಅಂತ್ಯದವರೆಗೆ ಒಟ್ಟು 8.96 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರು ಮತ್ತು ಮಣ್ಣಿನ ಸಂರಕ್ಷಣೆಗೊಳಪಡಿಸಿದೆ.

ಊ) ಮುಂದುವರಿದ ಯೋಜನೆಗಳನ್ನು ಹೊರತುಪಡಿಸಿ ಪ್ರತಿ ಹೆಕ್ಟೇರಿಗೆ ರೂ.6900 ರಂತೆ ಬಾಕಿ ಇರುವ ಪ್ರದೇಶವನ್ನು ಅಭಿವೃದ್ಧಿಪಡಿಸಲು ರೂ.4544.34 ಕೋಟಿಗಳು ಬೇಕಾಗುತ್ತದೆ.

ಋ) ಬಾಕಿ ಇರುವ ಮಳೆಯಾಶ್ರಿತ ಪ್ರದೇಶವನ್ನು ಜಲಾನಯನ ಅಭಿವೃದ್ಧಿಗೆ ಒಳಪಡಿಸಿ ಮುಂದಿನ 10 ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಹಣ ನೀಡುವಂತೆ ಭಾರತ ಸರ್ಕಾರವನ್ನು ಈಗಾಗಲೇ ಕೋರಲಾಗಿದೆ. ಈ ಪ್ರದೇಶಗಳನ್ನು ಹಣದ ಲಭ್ಯತೆ ಆಧರಿಸಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು.

1472(779) ಶ್ರೀ ಪಾಟೀಲ್, ಎಸ್.ಎಸ್.(ಮುಂಡರಗಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕು ಬ್ಯಾಲವಾಡಗಿ ತೋಟಗಾರಿಕಾ ಪಾರಂಗೆ ತುಂಗಭದ್ರಾ ನದಿಯಿಂದ ನೀರು ಪೂರೈಸಲು ಮಂಜೂರಾದ ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ;

ಆ) ಕಾಮಗಾರಿ ವಿಳಂಬವಾಗಲು ಕಾರಣಗಳೇನು ಹಾಗೂ ಕಾಮಗಾರಿಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಇ) ಕಾಮಗಾರಿಯನ್ನು ಪೂರ್ಣಗೊಳಿಸಿ ನೀರನ್ನು ಯಾವಾಗ ಪೂರೈಸಲಾಗುತ್ತದೆ?

ಶ್ರೀ ಆರ್.ಶ್ರೀನಿವಾಸ (ತೋಟಗಾರಿಕೆ ಸಚಿವರು)

ಅ) ಇಲ್ಲ.

ಆ) ಗದಗ ಜಿಲ್ಲಾ ಪಂಚಾಯತ್‌ನಿಂದ ಅನುಧಾನ ಬಿಡುಗಡೆ ಆಗಿರುವುದಿಲ್ಲ. ಅನುಧಾನ ಬಿಡುಗಡೆ ಯಾವ ತಕ್ಷಣ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಅನುಧಾನ ಬಿಡುಗಡೆಯಾಗಿ ಕಾಮಗಾರಿ ಪೂರ್ಣಗೊಂಡ ನಂತರ ನೀರನ್ನು ಪೂರೈಸಲು ಸಾಧ್ಯವಾಗುವುದು.

1473(780) ಶ್ರೀ ಪಾಟೀಲ್.ಎಸ್.ಎಸ್.(ಮುಂಡರಗಿ) ಮಾನ್ಯ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ್ ಜಿಲ್ಲೆ ಮುಂಡರಗಿ ಪಟ್ಟಣದ ಬಾಲಭವನದ ನಿರ್ಮಾಣದ ಕೆಲಸ ಪ್ರಾರಂಭವಾಗಿ ಎಷ್ಟು ವರ್ಷಗಳಾದವು;

ಆ) ಈಗಾಗಲೇ ಅದಕ್ಕೆ ಖರ್ಚಾದ ಹಣವೆಷ್ಟು;

ಇ) ಅದನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗಿರುತ್ತದೆ;

ಈ) ಹಣ ಬಿಡುಗಡೆ ಮಾಡಲು ವಿಳಂಬವಾಗಲು ಕಾರಣಗಳೇನು;

ಉ) ಸದರಿ ಬಾಲಭವನ ಪೂರ್ಣಗೊಳಿಸಿ ಮಕ್ಕಳ ಉಪಯೋಗಕ್ಕೆ ಎಂದಿನಿಂದ ಬಿಟ್ಟುಕೊಡಲಾಗುವುದು?

ಶ್ರೀಮತಿ ಬಾಗೀರಥಿ ಮರುಳಸಿದ್ದನಗೌಡ (ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವರು):

ಅ) ಮುಂಡರಗಿ ಪಟ್ಟಣದ ಬಾಲಭವನದ ನಿರ್ಮಾಣವು ದಿ.5.12.2001ರಿಂದ ಪ್ರಾರಂಭವಾಗಿದ್ದು ಮೂರು ವರ್ಷಗಳಾಗಿವೆ.

ಆ) ಬಾಲಭವನದ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಈಗಾಗಲೇ ರೂ.4.ಲಕ್ಷ ವೆಚ್ಚ ಮಾಡಲಾಗಿದೆ. ಅಲ್ಲದೇ, ಕಟ್ಟಡ ನಿರ್ಮಾಣ ಮುಂದುವರಿಕೆ ಬಗ್ಗೆ ರೂ.2.ಲಕ್ಷಗಳನ್ನು ಕರ್ನಾಟಕ ಲ್ಯಾಂಡ್ ಅರ್ಮಿ ಕಾರ್ಪೋರೇಷನ್‌ರವರಿಗೆ ಬಿಡುಗಡೆ ಮಾಡಲಾಗಿದೆ.

ಇ) ಬಾಲಭವನ ಕಟ್ಟಡ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಇನ್ನೂ ರೂ.4.ರೂಲಕ್ಷ ಅವಶ್ಯಕವಿರುತ್ತದೆ.

ಈ) ಸ್ಥಳೀಯ ಸಂಪನ್ಮೂಲಗಳ ಕೊರತೆಯಿಂದಾಗಿ ವಿಳಂಬವಾಗಿದೆ. ಬಾಲಭವನ, ಬೆಂಗಳೂರು ಇಲ್ಲಿಯ ಮಾರ್ಗ ಸೂಚಿಯಂತೆ ಒಟ್ಟು ನಿರ್ಮಾಣದ ಮೊಬಲಗಿನಲ್ಲಿ ಶೇಕಡಾ. 50ರಷ್ಟು ಹಣವನ್ನು ಬೆಂಗಳೂರಿನ ಬಾಲಭವನ ಬಿಡುಗಡೆ ಮಾಡಬೇಕಿದ್ದು, ಅದರಂತೆ ಪ್ರಸ್ತುತ ರೂ.4.00 ಲಕ್ಷ ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಸ್ಥಳೀಯ ಸಂಪನ್ಮೂಲಗಳಿಂದ ಕ್ರೋಢಿಕರಿಸಿ ಕೊಳ್ಳಬೇಕಿದ್ದು, ಬರಗಾಲದ ಕಾರಣದಿಂದ ಸ್ಥಳೀಯ ಸಂಪನ್ಮೂಲ ಕ್ರೋಢಿಕರಣ ಗೊಂಡಿರುವುದಿಲ್ಲ. ಪಟ್ಟಣ ಪಂಚಾಯ್ತಿ ಮುಂಡರಗಿ ಇವರು ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಸ್ಥಳೀಯ ಸಂಪನ್ಮೂಲ ಹಣ ಬಿಡುಗಡೆ ಮಾಡಲು ಒಪ್ಪಿರುವುದಿಲ್ಲ.